<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ**. 1527/2020**</u>

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 02-05-2026

| | | |
|---|---|---|
| ಹೆಸರು | : | ಪರಮೇಶ್ವರ |
| ತಂದೆಯ ಹೆಸರು | : | ಸಿದ್ದಣ್ಣ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಹೇರ ಕಟಿಂಗ ಕೆಲಸ |
| ವಾಸಸ್ಥಳ | : | ಬಡದಾಳ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

ಚಾಸಾ 6 ರಿಂದ 9 ಪರಿಚಯ ಇರುತ್ತಾರೆ. ಚಾಸಾ 10 ನನ್ನ ಅತ್ತೆ. ಮೃತ ಈರಣ್ಣ ಮಾವನಾಗಬೇಕು.

ಈಗ ಸುಮಾರು ವರ್ಷಗಳ ಹಿಂದೆ ಅರ್ಜುನಗಿ ತಾಂಡಾದ ಹತ್ತಿರ ಅಂಗಡಿ ಪೂಜಾ ನಿಮಿತ್ತ ಅರ್ಜುನಗಿಗೆ ಹೋಗಿದ್ದೆವು. ಆ ಸಮಯದಲ್ಲಿ ಮೃತ ನನ್ನ ಮಾವ ರಸ್ತೆ ಬದಿಗೆ ನಿಂತಿದ್ದರು. ಆಗ ಮೋಟರ ಸೈಕಲ ಸವಾರನು ಅತಿವೇಗವಾಗಿ ಚಲಾಯಿಸಿಕೊಂಡು ಬಂದು ನನ್ನ ಮಾವನಿಗೆ ಡಿಕ್ಕಿಪಡಿಸಿರುತ್ತಾನೆ. ಸದರಿ ಅಪಘಾತದಲ್ಲಿ ಆತನ ಕಾಲು ಮುರಿದು ಕೆಳಗೆ ಬಿದ್ದನು. ಆದ್ದರಿಂದ ತಲೆಗೆ ಗಂಭೀರ ಗಾಯವಾಗಿ ರಕ್ತಸ್ರಾವ ಆಗಿರುತ್ತದೆ. ನಂತರ ರೇವೂರು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗಮಧ್ಯ ಕಲಬುರಗಿ ಹತ್ತಿರ ನನ್ನ ಮಾವ ತೀರಿಕೊಂಡಿರುತ್ತಾನೆ. ನಂತರ ಆಸ್ಪತ್ರೆಯಲ್ಲಿ ಶವಪಂಚನಾಮೆ ಮಾಡಿರುತ್ತಾರೆ. ಗುನ್ಹೆಸ್ಥಳವನ್ನು ಪೋಲಿಸರಿಗೆ ತೋರಿಸಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ 31-01-2020 ರಂದು ಪೂಜಾ ನಿಮಿತ್ತ ಅರ್ಜುನಗಿಗೆ ನಾನು ಚಾಸಾ 6, 7 ಮತ್ತು ಮೃತ ಈರಣ್ಣ ಹೋಗಿದ್ದೆವು ಎಂದರೆ ಸರಿ. ನಾನು ಅದೇ ದಿನ ಮೋಟರ ಸೈಕಲನ ಸವಾರನ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯೂ ಅದನ್ನು ಗುರುತಿಸಿದ್ದು ಅದನ್ನು ನಿಪಿ **1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮೃತನ ಶವದ ಭಾವಚಿತ್ರ ಮತ್ತು ಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-**2** ಮತ್ತು **3** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-**4** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಪಘಾತ ಪಡಿಸಿತು ಎಂದು ಹೇಳುವ ಮೋಟರ ಸೈಕಲನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ **5** ರಿಂದ **8** ಎಂದು ಗುರುತಿಸಲಾಯಿತು.

ಅಪಘಾತ ಪಡಿಸಿದ ಸವಾರನ ಹೆಸರು ವಿಜಯಕುಮಾರ ಎಂದು ಗೊತ್ತಾಗಿರುತ್ತದೆ ಎಂದು ನಾನು ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-</u>

ಗುನ್ಹೆಸ್ಥಳ ಚೆಕ್ಕುಬಂದಿ ಒಂದು ಬದಿ ಹೇರ ಕಟಿಂಗ ಶಾಪ, ಒಂದು ಬದಿ ದುದನಿ ಅಫಜಲಪುರ ರಸ್ತೆ ಇರುತ್ತದೆ. ನಿಪಿ-1 ಎರಡು ಪುಟಗಳು ಇರುತ್ತದೆ. ದೂರು ನೀಡುವಾಗ ನನ್ನೊಂದಿಗೆ ಸಿದ್ದು ಮಾಸ್ತರ ಇದ್ದರು. ಊರಿನಲಿ ಸಹಜವಾಗಿ ರಸ್ತೆ ಹಂಸ ಇರುತ್ತದೆ ಎಂದರೆ ಸಾಕ್ಷಿ ಗುನ್ಹೆಸ್ಥಳದ ಸುತ್ತಮುತ್ತ ರಸ್ತೆ ಹಂಸಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಅಂಗಡಿಯಿಂದ ಮೃತ ಈರಣ್ಣ 15-20 ಅಡಿ ದೂರ ನಿಂತಿದ್ದನು. ನಾವು ರೇವೂರು ಆಸ್ಪತ್ರೆಗೆ ಹೋದಾಗ ಸಮಯ 12 ಗಂಟೆ ಆಗಿರಬಹುದು. ನಾವು ಆಸ್ಪತ್ರೆಗೆ ಟಂಟಂ ವಾಹನದಲ್ಲಿ ಹೋಗಿರುತ್ತೇವೆ. ಆಸ್ಪತ್ರೆ ಸಿಬ್ಬಂದಿಗಳಿಗೆ ಭೇಟಿ ಆಗಿರುತ್ತೇವೆ. ಕಲಬುರಗಿ ಒಳ್ಳೆ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದೆವು. ಮೃತನಿಗೆ ವಯಸ್ಸು ಆಗಿದೆ ಎಂದರರೆ ಸರಿ. ಮೃತ ತಾನಾಗಿಯೇ ಬಿದ್ದು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಮೋಟರ ಸೈಕಲ ಸಂಖ್ಯೆ ನನಗೆ ಗೊತ್ತಿಲ್ಲ.

ಆರೋಪಿಗೂ ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮೃತ ಈರಣ್ಣನಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಸರಿಯಲ್ಲ. ರೇವೂರು ಆಸ್ಪತ್ರೆಯಿಂದ ಕಲಬುರಗಿಗೆ ಆಂಬುಲೆನ್ಸನಲ್ಲಿ ತೆಗೆದುಕೊಂಡು ಹೋಗಿದ್ದೆವು. ನಾನು ಅದೇ ದಿನ ಸಾಯಂಕಾಲ 6 ಗಂಟೆಗೆ ನೀಡಿರುತ್ತೇನೆ. ದೂರನ್ನು ಠಾಣಾಧಿಕಾರಿಗೆ ನೀಡಿರುತ್ತೇನೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ